# ಕನ್ನಡ ಸಾಹಿತ್ಯದಲ್ಲಿ ದ್ರಾವಿಡ ಸಂವೇದನೆ ತಂದವರು ಚಂದ್ರಶೇಖರ ಕಂಬಾರರು

## ಹಿರಿಯ ಲೇಖಕ ಎಚ್.ಎಸ್.ಶಿವಪ್ರಕಾಶ್



ಬೆಂಗಳೂರು, ಡಿ.8: ಭಾರತೀಯ ಸಂಸ್ಕತವೆಂದರೆ ಕೇವಲ ರಾಮಾಯಣ, ಮಹಾಭಾರತ ಮಾತ್ರವೆಂದು ಅನೇಕರು ತಿಳಿದುಕೊಂಡಿದ್ದಾರೆ. ಆದರೆ, ಜ್ಞಾನಪೀಠ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರರ ಯಾವ ಕೃತಿಯೂ, ರಾಮಾಯಣ, ಮಹಾಭಾರತದಿಂದ ಪ್ರೇರಣೆ ಪಡೆದುಕೊಂಡಿಲ್ಲ ಎಂದು ಹಿರಿಯ ಲೇಖಕ ಎಚ್.ಎಸ್.ಶಿವಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ರವಿವಾರ ನಗರದ ಮಲ್ಲತ್ತಹಳ್ಳಿಯಲ್ಲಿರುವ ಸಾಹಿತ್ಯ ಅಕಾಡಮಿ ಸಭಾಂಗಣದಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯು ಹಮ್ಮಿಕೊಂಡಿದ್ದ 'ಚಂದ್ರಶೇಖರ ಕಂಬಾರರಿಗೆ ಫೆಲೋಶಿಪ್ ಪ್ರದಾನ ಮತ್ತು ಸಂವಾದ ಕಾರ್ಯಕ್ರಮ'ದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಂಟೇಸ್ವಾಮಿ ಪುರಾಣ, ಮಲೆಮಾದೇಶ್ವರ ಕಾವ್ಯಗಳು ಯಾವ ರಾಮಾಯಣ-ಮಹಾಭಾರತಕ್ಕೂ ಕಡಿಮೆ ಇಲ್ಲ ಎಂದು ಪ್ರತಿಪಾದಿಸಿದರು.

ಆಧುನಿಕತೆಗೆ ಸಮಾಜವಾದ ಮತ್ತು ಉದಾರೀಕರಣ ಎನ್ನುವ ಎರಡು ಮುಖಗಳಿವೆ. ಇವೆರಡೂ ದೃಷ್ಟಿಗಳಿಗೂ ಕಂಬಾರರ ಕೃತಿಗಳು ಒಪ್ಪಿಕೊಳ್ಳುವುದಿಲ್ಲ. ಕಂಬಾರರ ಟೀಕೆಗಳು ಹೆಚ್ಚು ಸೂಕ್ಷ್ಮತೆಯಿಂದ ಕೂಡಿರುತ್ತದೆ. ಪಡೆದುಕೊಳ್ಳುವುದಕ್ಕಿಂತ ಹೆಚ್ಚು ಮೌಲಿಕವಾದುದನ್ನು ನಾವು ಕಳೆದುಕೊಂಡಿದ್ದೇವೆ ಎಂದು ಅವರ ಸಾಹಿತ್ಯ ತೋರಿಸುತ್ತದೆ. ಇಂದು ಬಹಳಷ್ಟು ಜನ ಭಾರತೀಯ ಸಂಸ್ಕೃತ ಎಂದರೆ ಕೇವಲ ರಾಮಾಯಣ, ಮಹಾಭಾರತ ಮಾತ್ರವೆಂದು ತಿಳಿದುಕೊಂಡಿದ್ದಾರೆ ಎಂದು ಎಚ್.ಎಸ್.ಶಿವಪ್ರಕಾಶ್ ಹೇಳಿದರು.

ಕಂಬಾರರು ಕನ್ನಡ ಸಾಹಿತ್ಯದಲ್ಲಿ ದ್ರಾವಿಡ ಸಂವೇದನೆಯನ್ನು ಮೊಟ್ಟ ಮೊದಲಿಗೆ ತಂದವರು. ಬಿ.ಎಂ.ಶ್ರೀ. ಅವರಿಗೆ ತಮಿಳು ಸಾಹಿತ್ಯ ಗೊತ್ತಿತ್ತು. ಆದರೆ, ದ್ರಾವಿಡ ಸಂವೇದನೆ ಇರಲಿಲ್ಲ. ಬೇಂದ್ರೆ, ರಾಮನುಜಂ ಅವರಲ್ಲಿಯೂ ಇರಲಿಲ್ಲ. ಕಂಬಾರರು ನೇರವಾಗಿ ಜನರ ಪರಂಪರೆ ಇಂದ ತನ್ನ ಸಂಪನ್ಮೂಲಗಳನ್ನು ಪಡೆದುಕೊಂಡ ಕಾರಣ ದ್ರಾವಿಡ ಪರಂಪರೆಯ ಮುಂದುವರಿಕೆ ಆಗಿದೆ. ವಚನಕಾರರಿಂದ ಅತ್ಯಂತ ಸಂಪನ್ಮೂಲಗಳನ್ನು, ಪರಂಪರೆಯನ್ನು ಸೃಜನಾತ್ಮಕವಾಗಿ ಪಡೆದುಕೊಂಡವರು ಎಂದು ಅವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯ ಅಧ್ಯಕ್ಷ ಮಾಧವ ಕೌಶಿಕ್, ಕಾರ್ಯದರ್ಶಿ ಕೆ.ಶ್ರೀನಿವಾಸರಾವ್, ಉಪಾಧ್ಯಕ್ಷೆ ಕುಮುದ್ ಶರ್ಮಾ, ಲೇಖಕರಾದ ಬಸವರಾಜ ಕಲ್ಗುಡಿ, ಬಸವರಾಜ ಸಾದರ ಇದ್ದರು.